# ಮಧುವನರಸಿ ಚಂದ್ರನೆಡೆಗೆ...

‘ಅರೆಮಾನವ ಪಡೆಯ ವಿಚಾರವೇ. ಅವರು ಮುಖ್ಯವಾಹಿನಿಗೆ ಬಂದ ಬಳಿಕ ಪಡೆಯ ಸದಸ್ಯರೆಂಬ ಬಿರುದಾಂಕಿತವನ್ನೇ ಕಿತ್ತೊಗೆಯಬೇಕಿದೆ.’

‘ಬಹುಶಃ ಆಡಳಿತ ವರ್ಗ ಈ ಕುರಿತಾಗಿಯೂ ತರಬೇತಿ ಪೂರ್ಣಗೊಂಡ ಬಳಿಕ ನಿರ್ಧಾರ ತೆಗೆದುಕೊಳ್ಳಬಹುದು. ಪ್ರತಿ ಸಾರಿ ನಾವು ಆ ಹೆಸರಿಂದ ಅವರನ್ನು ಗುರುತಿಸಿ ನಮ್ಮ ಸಂವಾದದಲ್ಲಿ ಸಂಬೋಧಿಸುವುದರಿಂದ ಅವರನ್ನು ಮುಖ್ಯವಾಹಿನಿಗೆ ಕರೆತರಲಾಗುತ್ತಿದೆ ಎಂಬ ವಿಚಾರವನ್ನೇ ಮರೆತಂತಾಗುತ್ತಿದೆ.’

‘ಆಡಳಿತ ವರ್ಗದ ವಿಭಾಗೀಯ ಅಧಿಕಾರಿ ನನಗೆ ಪರಿಚಯವುಂಟು. ಕೇಳಿ ನೋಡ್ತೀನಿ. ಆದರೆ ನಿನ್ನಲ್ಲಿ ಸುಳಿದ ವಿಚಾರವೇ ಅವರಲ್ಲೂ ಮೂಡಿರಬಹುದು.’

